# ಓದುಗರ ಸ್ಪಂದನ

## ಮಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ

"ರಾಜಕಾರಣಿಯಾಗು
ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು. ನೀ ಬಯಸಿದಂತಾಗು
ಏನಾದರೂ ಸರಿಯೇ ಮೊದಲು ಮಾನವನಾಗು."

ಡಾ. ಸಿದ್ಧಯ್ಯ ಪುರಾಣಿಕ್‌ರವರು ತಿಳಿಸಿರುವ ಮೇಲಿನ ಕವಿವಾಣಿಯಂತೆ ತಮ್ಮ ಮಕ್ಕಳಲ್ಲಿ ಮಾನವೀಯ ಗುಣಗಳನ್ನು ಬೆಳೆಸಬೇಕು ಮತ್ತು ಅದಕ್ಕೆ ಪೂರಕವಾಗುವಂತೆ ತಮ್ಮ ಮಕ್ಕಳಿಗೆ ಯಾವ ರೀತಿಯ ಶಿಕ್ಷಣವನ್ನು ನೀಡುತ್ತಿದ್ದೇವೆ ಎಂದು ಎಷ್ಟು ಜನ ತಂದೆತಾಯಿಗಳು ಯೋಚಿಸುತ್ತಾರೆ? ಶಾಲೆಯಲ್ಲಿ ನೀಡುತ್ತಿರುವ ಸಾಂಪ್ರದಾಯಿಕ ಶಿಕ್ಷಣದಿಂದ ಅಧಃಪತನಕ್ಕೆ ಇಳಿದಿರುವ ನಮ್ಮ ದೇಶದ ನೈತಿಕತೆಯನ್ನು ಮೇಲೆತ್ತುವುದಕ್ಕೆ ಪ್ರಸ್ತುತ ನಮ್ಮ ದೇಶದ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವಂತಹ ಶಿಕ್ಷಣವನ್ನು ನಾವು ಒದಗಿಸಬೇಕಾಗಿದೆ. ತಮ್ಮ ಮಕ್ಕಳು ಈ ಭವ್ಯ ಭಾರತದಲ್ಲಿ ಅವರ ಜೀವನವನ್ನು ದೈಹಿಕವಾಗಿ, ಮಾನಸಿಕವಾಗಿ, ನೈತಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ರೂಪಿಸುವುದರಲ್ಲಿ ಶಿಕ್ಷಕರಿಗಿಂತ ತಂದೆತಾಯಿಗಳದೆ ಹೆಚ್ಚಿನ ಪಾತ್ರವಿದೆ ಎಂದು ಹೇಳುವುದರಲ್ಲಿ ಎರಡು ಮಾತಿಲ್ಲ.

ಯಾವ ತಂದೆತಾಯಿಗಳಿಗೂ ತಮ್ಮ ಮಕ್ಕಳು ಡಾಕ್ಟರೇ ಆಗಬೇಕು, ಇಂಜಿನೀಯರೇ ಆಗಬೇಕು ಎಂಬ ದೃಢನಿರ್ಧಾರವನ್ನು ತೆಗೆದುಕೊಳ್ಳುವ ನೈತಿಕ ಹಕ್ಕಿಲ್ಲ. ಮಕ್ಕಳು ಅನುಕರಣೆಯಿಂದ ಕಲಿಯುವುದು ಹೆಚ್ಚು. ಆದ್ದರಿಂದ ತಂದೆತಾಯಿಗಳು ತಮ್ಮ ಮಕ್ಕಳಿಗೆ ಶಾಲೆಯಲ್ಲಿ ದೊರಕದಂತಹ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ಕಥೆಗಳ ಮೂಲಕ, ದೃಷ್ಟಾಂತಗಳ ಮೂಲಕ ನೀಡಬೇಕು. ವೃತ್ತಪತ್ರಿಕೆಗಳಲ್ಲಿ, ಸಾಪ್ತಾಹಿಕಗಳಲ್ಲಿ ಬರುವ ನೀತಿಕಥೆಗಳನ್ನು ಓದುವಂತೆ ಪ್ರೇರೇಪಿಸಬೇಕು. ದೇಶದ ಬಗ್ಗೆ ಅಭಿಮಾನ ಮೂಡುವಂತೆ ಮಗುವನ್ನು ಸ್ವಯಂ ಪ್ರೇರಣೆಗೊಳಿಸುವ ವ್ಯಕ್ತಿತ್ವ ಮೊದಲು ನಮ್ಮಲ್ಲಿರಬೇಕು. ಇಂದಿನ ಮುನ್ನಡೆದ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ನಾವು ಸಮಾಜಕ್ಕೆ ನೀಡುತ್ತಿರುವ ಉಪಯೋಗಗಳೇನು, ದುರುಪಯೋಗಗಳೇನು ಎಂಬುದನ್ನು ತಿಳಿದು ಮಕ್ಕಳಲ್ಲಿ ಮನವರಿಕೆಯನ್ನು ಮೂಡಿಸುವುದು ನಮ್ಮ ಆದ್ಯಕರ್ತವ್ಯ.

ರವಿಪ್ರಸಾದ್. ಬಿ.ಎಸ್ಸಿ., ಎಂ.ಎಡ್. ವಿಜ್ಞಾನ ಶಿಕ್ಷಕರು,
ಡೀಡ್ ಸಂಸ್ಥೆ, ಹುಣಸೂರು.

ಮಕ್ಕಳನ್ನು ಹೇಗೆ ಬೆಳೆಸಬೇಕೆಂದು ಯೋಚಿಸುವ, ತರಬೇತಿ ಪಡೆಯುವ ಮೊದಲು ನಾವು ಎಂತಹ ಮಕ್ಕಳನ್ನು ಪಡೆಯಬೇಕೆಂದು ಯೋಚಿಸಬೇಕು. ಏಕೆಂದರೆ ಮಕ್ಕಳ ಬೌದ್ಧಿಕ, ಮಾನಸಿಕ, ಭಾವನಾತ್ಮಕ, ಶಾರೀರಿಕ, ಧಾರ್ಮಿಕ ಬೆಳವಣಿಗೆ ಹೊರಪ್ರಪಂಚಕ್ಕೆ ಬಂದಮೇಲೆ ಆಗುವುದೆಂದು ತಿಳಿಯುವುದು ತಪ್ಪು. ಅದು ತಾಯಿಯ ಗರ್ಭದಲ್ಲಿರುವಾಗಲೇ ಪ್ರಾರಂಭವಾಗುತ್ತದೆ ಎಂಬುದಕ್ಕೆ ವೈಜ್ಞಾನಿಕ ಪುರಾವೆಗಳಿವೆ. ತಾವು ಎಂತಹ ಮಕ್ಕಳನ್ನು ಪಡೆಯಬೇಕೆಂದು ತಾಯ್ತಂದೆಯರು ಕೂಡಿಯೆ ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು. ಮಗುವಿನ ಒಳಿತು-ಕೆಡುಕು ಇಬ್ಬರಿಗೂ ಸಂಬಂಧಿಸಿಲ್ಲವೆ? ತಾಯ್ತಂದೆಗಳ ಭಾವನೆ ವಿಚಾರಗಳು ನಡೆನುಡಿಗಳು ಗರ್ಭಸ್ಥ ಶಿಶುವಿನ ಮೇಲೆ ಪರಿಣಾಮ ಬೀರುತ್ತವೆ. ಮಗು ಜನಿಸಿದ ಮೇಲೆ ಮೂಗು ಅಪ್ಪನ ಹಾಗೆ, ಹುಬ್ಬು ಅಜ್ಜನ ಹಾಗೆ, ಕಣ್ಣು ತಾಯಿಯ ಹಾಗೆ ಹೀಗೆಂದು ಮಗುವಿನ ಶರೀರವನ್ನಷ್ಟೆ ಅಳೆಯುತ್ತೇವೆ ವಿನಃ ಮಗುವಿನ ಸರ್ವಾಂಗೀಣ ಬೆಳವಣಿಗೆಯನ್ನು ಅವರವರ ಗುಣಸ್ವಭಾವಕ್ಕೆ ಏಕೆ ಹೋಲಿಸುವುದಿಲ್ಲ? ಗರ್ಭವತಿ ಸ್ತ್ರೀಯನ್ನು, ಬೇರೆ ಎಲ್ಲ ಸಂದರ್ಭಗಳಿಗಿಂತ ಅಧಿಕವಾಗಿ, ಒಳ್ಳೆಯ ರೀತಿಯಲ್ಲಿ ನಡೆಸಿಕೊಳ್ಳುವುದು ಅತ್ಯಂತ ಆವಶ್ಯಕ. ಏಕೆಂದರೆ ಆ ಸಂದರ್ಭದಲ್ಲಿ ಆಕೆಯ ಮನಸ್ಸು ಉತ್ತಮ ಸ್ಥಿತಿಯಲ್ಲಿಲ್ಲದಿದ್ದರೆ ಅದು ಗರ್ಭಸ್ಥ ಶಿಶುವಿನ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುತ್ತದೆ.

> **ತಾಯಿಯು ಗರ್ಭವತಿಯಾಗಿರುವಾಗ ಆಕೆಯಮೇಲೆ ನಡೆಯುವ ದೌರ್ಜನ್ಯ ಪಾತಕಿಗಳ, ಮಂದಬುದ್ಧಿಗಳ ಮತ್ತು ಅಂಗವಿಕಲರ ಜನನಕ್ಕೆ ಕಾರಣವಾಗುತ್ತದೆ.**
>
> —*ಈಲಾ ವ್ಹೀಲರ್ ವಿಲ್ಕಾಕ್ಸ್* (Ella Wheeler Wilcox).

ತಾಯಿಯ ಗರ್ಭದಿಂದ ಹೊರಬಂದ ಮಗುವಿಗೆ ದಿನಗಳೆದಂತೆಲ್ಲ ಮನೆ ಹಾಗೂ ಸುತ್ತಮುತ್ತಲಿನ ಪರಿಸರ ಪರಿಣಾಮ ಬೀರುವುದರಿಂದ ಮಗುವಿನ ಪಾಲನೆ ಪೋಷಣೆಯಲ್ಲಿ ತಾಯ್ತಂದೆಯರು ಜಾಗರೂಕರಾಗಿರಬೇಕು. ಮನೆಗೆ ಯಾರೇ ಏನೇ ತಂದರೂ ಮಗುವಿನ ಕೈಗೆ ಕೊಟ್ಟು, ತಿನ್ನು ಎಂದು ಹೇಳದೆ, ಮನೆಯಲ್ಲಿಯ ಎಲ್ಲ ಅಕ್ಕ, ಅಣ್ಣ, ಅತ್ತೆ, ಮಾಮ, ಅಜ್ಜ, ಅಜ್ಜಿಯರಿಗೆ ಕೊಟ್ಟು, ಬಾ ಎಂದು ಹಂಚಿ ತಿನ್ನುವ ಸ್ವಭಾವ ಬೆಳೆಸಬೇಕು. ಬರವಣಿಗೆಗೆ ಮೊದಲು ಮಗುವಿಗೆ ಗೀಚಲು, ಚಿತ್ರ ಬಿಡಿಸಲು ಅವಕಾಶ ಕೊಡಬೇಕು, ಮಣ್ಣು ಮರಳು ನೀರಿನಲ್ಲಿ ಆಡುವ ಅವಕಾಶವೀಯಬೇಕು. ಕೆಲಸದಲ್ಲಿ ತೊಡಗು

ಪುದರಿಂದ ಮಗುವಿನ ಸಣ್ಣ ಸ್ನಾಯುಗಳ ಬೆಳವಣಿಗೆ ಆಗಿ ಬಳಪ ಹಿಡಿದು ಬರೆಯಲು ಕೈಬೆರಳುಗಳಲ್ಲಿ ಹಿಡಿತ ಬರುತ್ತದೆ. ಈ ಎಲ್ಲ ಚಟುವಟಿಕೆ ಬಿಟ್ಟು ನೇರವಾಗಿ ಬರವಣಿಗೆ ಕಲಿಸುವುದು ಸರಿಯಲ್ಲ. ಒಂದು ಮಗುವಿನೆದುರಲ್ಲಿ ಇನ್ನೊಂದು ಮಗುವನ್ನು ಹೊಗಳುವುದು ಹೋಲಿಸುವುದರಿಂದ ಆ ಮಗುವನ್ನು ಇದು ದ್ವೇಷಿಸುವುದು ಮತ್ತು ತನ್ನ ಬಗ್ಗೆ ಕೀಳರಿಮೆ ಉಂಟಾಗುತ್ತವೆ. ಆಗ ಆಟಪಾಟಗಳಲ್ಲಿ ತೊಡಗದೆ ಏನೋ ಆದವರ ಹಾಗೆ ಮಂಕಾಗಿ ಇರುತ್ತಾನೆ.

—ಭಗಿನಿ ಶ್ರೀದೇವಿ, ಶ್ರೀಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆ, ಬೆಳಗಾವಿ.

---

ಟಿ.ವಿ.ಯಲ್ಲಿ ಮಕ್ಕಳಿಗೆ ಸಹಕಾರಿಯಾಗುವ ಕಾರ್ಯಕ್ರಮಗಳು ಅತ್ಯಲ್ಪ. ಚಲನಚಿತ್ರಗಳು, ಧಾರಾವಾಹಿಗಳು ಅತ್ಯಧಿಕ. ಇವುಗಳಲ್ಲಿ ನಾಯಕ ನಾಯಕಿಯರು ಸತ್ಯ, ಧರ್ಮ, ನ್ಯಾಯಗಳಿಗಾಗಿ ಕಡೆಯತನಕ ಕಷ್ಟ, ನಷ್ಟಗಳನ್ನು ಅನುಭವಿಸುವುದನ್ನು ಕಾಣುತ್ತಾರೆ. ಖಳನಾಯಕನಾದವನು ಕ್ರೌರ್ಯ, ಹಿಂಸೆ, ಅನಾಚಾರಗಳಿಂದ ತಾನು ಬಯಸಿದ ಭೋಗಭಾಗ್ಯಗಳನ್ನು ಸುಲಭವಾಗಿ ದಕ್ಕಿಸಿಕೊಳ್ಳುವುದನ್ನು ಕಾಣುತ್ತಾರೆ. ಜೊತೆಗೆ ಕಳ್ಳತನ, ದರೋಡೆ, ಸುಲಿಗೆ, ಅತ್ಯಾಚಾರ ಇವುಗಳನ್ನೆಲ್ಲಾ ಕಣ್ಣಿಗೆ ಕಟ್ಟಿದಂತೆ ಟಿ.ವಿ. ತೆರೆಯ ಮೇಲೆ ಚಿತ್ರಿಸಿರುತ್ತಾರೆ.

---

**ಮಕ್ಕಳು ಟಿ.ವಿ.ನೋಡುವ ವಿಷಯದಲ್ಲಿ ಹಿರಿಯರು ಅವರಿಗೆ ಮಾರ್ಗದರ್ಶನ ನೀಡಿ, ಅವರು ವಿಮರ್ಶಾತ್ಮಕವಾಗಿ ಟಿ.ವಿ.ಯನ್ನು ನೋಡಿ ಅದರಿಂದ ಅವರು ಪಾಠ ಕಲಿಯುವಂತೆ ಮಾಡದಿದ್ದರೆ ಟಿ.ವಿ. ನೋಡುವುದರಿಂದ ಮಕ್ಕಳು ಹೆಚ್ಚು ನಿಷ್ಕ್ರಿಯರೂ ನಿರ್ಜೀವಿಗಳೂ ಆಗುವ ಸಂಭವವಿದೆ.**

—*ಪ್ಯಾಟ್ರಿಕಾ ಮಾರ್ಕ್ಸ್ ಗ್ರೀನ್‌ಫೀಲ್ಡ್*
*(Patrica Marks Greenfield).*

---

ತಂದೆತಾಯಿಯರಿಬ್ಬರು ಹೊರಗೆ ದುಡಿಯಲು ಹೋಗುವ ಕುಟುಂಬಗಳೇ ಇಂದು ಹೆಚ್ಚಾಗುತ್ತಿವೆ. ಇತ್ತೀಚೆಗೆ ವೃದ್ಧರನ್ನು ವೃದ್ಧಾಶ್ರಮಗಳಿಗೆ ಸೇರಿಸಿರುತ್ತಾರೆ. ಶಾಲೆಯಿಂದ ಹಿಂದಿರುಗಿದ ಮಕ್ಕಳನ್ನು ಪ್ರೀತಿಯಿಂದ ಉಪಚರಿಸುವ, ಹಿತವಚನಗಳಿಂದ ಅವರಿಗೆ ಸೂಕ್ತ ಮಾರ್ಗದರ್ಶನ ಮಾಡಬಲ್ಲ ಹಿರಿಯರ ಅಭಾವ ಉಂಟಾಗಿದೆ. ಮಕ್ಕಳು ತಮ್ಮ ಹೆಚ್ಚಿನ ವೇಳೆಯನ್ನು ಟಿ.ವಿ. ವೀಕ್ಷಣೆಯಲ್ಲೇ ಕಳೆಯುತ್ತಾರೆ. ಇದರಿಂದ ಅವರು ಹೆಚ್ಚು, ಹೆಚ್ಚು ಹಿಂಸಾತುರರೂ ಭಾವಹೀನರೂ ಆಗುತ್ತಿದ್ದಾರೆ. ಈ ಅಪಾಯಕಾರಿಯಾಗಿರುವ ಟಿ.ವಿ.ಪ್ರಭಾವದ ಅಲೆಗಳಿಂದ ನಮ್ಮ ಮಕ್ಕಳನ್ನು ರಕ್ಷಿಸಿಕೊಳ್ಳಬೇಕಾಗಿದೆ.

ಹಿಂದೆ ಮಕ್ಕಳಿಗೆ ಬಾಲ್ಯದಲ್ಲಿ ಆಟ, ಪಾಠಗಳಿಂದ ದೊರೆಯುತ್ತಿದ್ದ ಸಹಜ, ಸುಂದರ ಮನೋರಂಜನೆ ಮನೋಲ್ಲಾಸಗಳು ಇಂದು ದೊರೆಯುತ್ತಿಲ್ಲ. ಅವರಲ್ಲಿ ಬಾಲ್ಯಸಹಜವಾದ ಮುಗ್ಧತೆ, ಮಧುರತೆಗಳು ಕಣ್ಮರೆಯಾಗುತ್ತಿವೆ. ಆ ಎಳೆಯ ಮನಸ್ಸನ್ನು ಕಲುಷಿತಗೊಳಿಸುವ ಸಂಗತಿಗಳು ಅಗ್ಗವಾಗಿ ದೊರೆತು ಅವರು ತಮ್ಮ ಮುಗ್ಧತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಖಳನಾಯಕನ ಮಾರ್ಗವನ್ನು ಅನುಸರಿಸಿ ಸುಲಭವಾಗಿ ಸುಖಪಡೆಯಬಹುದೆಂದು ಭ್ರಮಿಸಿ ಮನೆಮಂದಿಗೆ ಹೊರೆಯಾಗಿಯೂ, ಸಮಾಜಘಾತುಕರಾಗಿಯೂ ಪರಿಣಮಿಸುತ್ತಿದ್ದಾರೆ.

ಮಕ್ಕಳನ್ನು ಟಿ.ವಿ. ನೋಡಬೇಡ, ಓದು, ಆಡು ಎಂದೆಲ್ಲ ಉಪದೇಶ ಮಾಡುವ ಬದಲು ಹಿರಿಯರಾದ ತಾವೇ ಟಿ.ವಿ.ಯ ಆಕರ್ಷಣೆಯ ಹಂಬಲವನ್ನು ತ್ಯಜಿಸಿ, ಸಂಜೆಯ ಹೊತ್ತು ಮಕ್ಕಳನ್ನು ಆಟದ ಮೈದಾನಕ್ಕೆ ಕರೆದೊಯ್ದು ಅವರ ಸಮವಯಸ್ಕರ ಜೊತೆ ಆಡಲು ಬಿಡಬೇಕು. ಇದರಿಂದ ಮಕ್ಕಳ ಮೈ-ಮನಸ್ಸುಗಳಿಗೆ ವ್ಯಾಯಾಮ ದೊರೆಯುತ್ತದೆ. ಮಾನವೀಯ ಗುಣಗಳಾದ ಪ್ರೀತಿ, ತಾಳ್ಮೆ, ಸಹಬಾಳ್ವೆ, ಸಹಕಾರ ಮನೋಭಾವನೆ ಮೊದಲಾದ ಉದಾತ್ತ ಗುಣಗಳು ಅವರಲ್ಲಿ ಮೂಡಲು ಸಹಕಾರಿಯಾಗುತ್ತದೆ.

ಮನೆಯ ಪಾಠಕ್ಕೆಂದು ಮಕ್ಕಳನ್ನು ಹೊರಗೆ ಅಟ್ಟದೆ ಸ್ವತಃ ತಂದೆತಾಯಿಗಳೇ ತಮ್ಮ ಮಕ್ಕಳಿಗೆ ಪ್ರೀತಿಯಿಂದ ಪಾಠಹೇಳಿಕೊಡಬೇಕು. ಮಕ್ಕಳ ಪ್ರತಿಭೆಯನ್ನು ಗುರುತಿಸಿ ಚಿತ್ರಕಲೆ, ಸಂಗೀತ, ಸಾಹಿತ್ಯ, ನೃತ್ಯ, ನಾಟಕದಂತಹ ಲಲಿತಕಲೆಗಳಲ್ಲಿ ಅವರಿಗೆ ಅಭಿರುಚಿ ಹುಟ್ಟುವಂತೆ ಮಾಡಬೇಕು. ಅವರನ್ನು ಸೃಜನಶೀಲ ಚಟುವಟಿಕೆಗಳಿಗೆ ಹುರಿದುಂಬಿಸಬೇಕು. ಮಕ್ಕಳ ಜ್ಞಾನಾರ್ಜನೆಗೆ ಸಹಕಾರಿಯಾಗುವಂತಹ ರಸಪ್ರಶ್ನೆ ಕಾರ್ಯಕ್ರಮ, ವಾರ್ತೆಗಳು, ಮಕ್ಕಳದೇ ಆದ ಕೆಲವು ಕಾರ್ಯಕ್ರಮಗಳನ್ನು ಮಾತ್ರ ನಿಗದಿತ ಅವಧಿಯಲ್ಲಿ ನೋಡಲು ಬಿಟ್ಟರೆ ಅವರಿಗೂ ಟಿ.ವಿ. ನೋಡಿದ ತೃಪ್ತಿ ಸಮಾಧಾನಗಳು ದೊರೆಯುತ್ತವೆ.

—ಗೀತಾ ಕೆ.ಮೂರ್ತಿ.

---

ಮಗುವು ತಾಯಿಯ ಗರ್ಭದಲ್ಲಿರುವಾಗಲೇ ತಾಯಿಯ ಮಾನಸಿಕ ಸ್ಥಿತಿ ಹಾಗೂ ಆಲೋಚನೆಗಳು ಮಗುವಿನ ಮೇಲೆ ಪರಿಣಾಮ ಬೀರುತ್ತದೆಂದು ವಿಜ್ಞಾನ ಹೇಳುತ್ತದೆ. ಆದ್ದರಿಂದ ತಾಯಿ ತನ್ನ ಮನಸ್ಸನ್ನು ಪ್ರಶಾಂತವಾಗಿರಿಸಿಕೊಂಡು ಯಾವಾಗಲೂ ಒಳ್ಳೆಯ ವಿಷಯಗಳ ಆಲೋಚನೆ, ಒಳ್ಳೆಯ ಕಥೆಗಳನ್ನು ಓದುವುದು ಹಾಗೂ ದೇವರ ಧ್ಯಾನದಲ್ಲಿ ಮನಸ್ಸನ್ನು ಹೆಚ್ಚು ಕೇಂದ್ರೀಕರಿಸುವ ಚಟುವಟಿಕೆಗಳಲ್ಲಿ ತೊಡಗಬೇಕು.

ಮಗು ಹುಟ್ಟಿದ ನಂತರ ಶಾಲೆಗೆ ಹೋಗುವವರೆಗೂ ತಂದೆತಾಯಿಯರ ಜೊತೆ ಮನೆಯಲ್ಲೇ ಹೆಚ್ಚು ಕಾಲ ಇರುತ್ತದೆ. ಈಗಿನ ಮಕ್ಕಳಿಗೆ ಬುದ್ಧಿಶಕ್ತಿ, ಗ್ರಹಣಶಕ್ತಿ, ಚಾಣಾಕ್ಷತೆ ನಮಗಿಂತಲೂ ಬಹಳ ಹೆಚ್ಚು. ಮಗುವಿನ ಈ ಶಕ್ತಿಯನ್ನು ಉಪಯುಕ್ತ ರೀತಿಯಲ್ಲಿ ಬಳಸಲು ನಾವು ಅವರಿಗೆ ಸರಿಯಾದ ಮಾರ್ಗದರ್ಶನ ಕೊಡಬೇಕು. ತಂದೆತಾಯಿಯರು ಮಗುವಿನ ಎದುರಿನಲ್ಲಿ ಪರಸ್ಪರ ಜಗಳವಾಡುವುದು, ಪರಸ್ಪರ ನಿಂದಿಸು

ವುದು, ಕೆಟ್ಟ ಮಾತುಗಳನ್ನಾಡುವುದರಿಂದ ಮಗು ಇದನ್ನೇ ಅನುಕರಿಸಬಹುದು. ಮಗು ಬೆಳೆಯುವಾಗ ತಂದೆತಾಯಿಯರು ಮನೆಯಲ್ಲಿ ಪ್ರಶಾಂತವಾದ ವಾತಾವರಣವನ್ನು ಸೃಷ್ಟಿಸಬೇಕು. ಕೆಲವೊಮ್ಮೆ ಮಗು ತಪ್ಪುಮಾಡಿದಾಗ ತಾಯಿಯಾಗಲಿ ಅಥವಾ ತಂದೆಯಾಗಲಿ ಮಗುವಿನ ಪರ ವಹಿಸಿಕೊಳ್ಳಬಾರದು. ಇದರಿಂದ ಮಗು ಹೆಚ್ಚು ತಪ್ಪು ಮಾಡುವುದನ್ನು ರೂಢಿಸಿಕೊಳ್ಳುತ್ತದೆ. ಹೆಚ್ಚು ತಪ್ಪು ಮಾಡಿದಾಗ ಸರಿಯಾದ ರೀತಿಯಲ್ಲಿ ನಿಂದಿಸಿ, ಭಯಪಡಿಸಿ ಮಗುವಿಗೆ ತನ್ನ ತಪ್ಪಿನ ಬಗ್ಗೆ ಅರಿವು ಮೂಡಿಸಿ ಮುಂದೆ ತಪ್ಪು ಮಾಡದಂತೆ ನೋಡಿಕೊಳ್ಳಬೇಕು. ಹಟದ ಸ್ವಭಾವ ಮಕ್ಕಳಿಗೆ ಬಾರದಂತೆ ಉಪಾಯವಾಗಿ ಸಂದರ್ಭವನ್ನು ನಿರ್ವಹಿಸಬೇಕು.

*ನಿಮ್ಮ ಮಕ್ಕಳಲ್ಲಿ ವಿಶ್ವಾಸವಿಡಿ ಮತ್ತು ಅವರು ಆತ್ಮ ವಿಶ್ವಾಸ ಬೆಳಸಿಕೊಳ್ಳಲು ಸಹಾಯಮಾಡಿ. ಇದು ನೀವು ಅವರಿಗಾಗಿ ಬಿಟ್ಟುಹೋಗುವ ಆಸ್ತಿಗಿಂದ ಶ್ರೇಷ್ಠವಾದುದು.*
*—ಈಲಾ ವ್ಹೀಲರ್ ವಿಲ್ಕಾಕ್ಸ್* (Ella Wheeler Wilcox).

ಮಕ್ಕಳಲ್ಲಿ ಚಿಕ್ಕಂದಿನಿಂದಲೂ ಸಮಯಪ್ರಜ್ಞೆ, ಅಚ್ಚುಕಟ್ಟುತನ, ಧಾರ್ಮಿಕ ಮನೋಭಾವ ಹಾಗೂ ಶಿಸ್ತಿನ ಬಗ್ಗೆ ಅರಿವು ಮೂಡಿಸುವುದರಲ್ಲಿ ತಂದೆತಾಯಿಯರ ಪಾತ್ರ ಬಹಳ ಮುಖ್ಯ. ಮಗು ತನ್ನ ಸಹಪಾಠಿಗಳೊಂದಿಗೆ ಸ್ನೇಹಿತರೊಂದಿಗೆ, ಮನೆಯ ಸದಸ್ಯರೊಂದಿಗೆ ಹೊಂದಿಕೊಂಡು ಹೋಗುವ ಮತ್ತು ಪರೋಪಕಾರದ ಮನೋಭಾವನೆಗಳನ್ನು ಬೆಳೆಸಬೇಕು.

**—ಡಿ.ಎಸ್. ವಿಶ್ವೇಶ್ವರ, ಹಿರಿಯ ಉಪನ್ಯಾಸಕರು ವಿದ್ಯುನ್ಮಾನ ವಿಭಾಗ, ಎ.ಪಿ.ಎಸ್. ವಿದ್ಯಾಸಂಸ್ಥೆ, ಬೆಂಗಳೂರು.**

ಒಮ್ಮೆ ಸ್ವಾಮೀಜಿಯೊಬ್ಬರ ಬಳಿ ಬಂದ ಭಕ್ತನೊಬ್ಬ ತನ್ನ ಮಗನ ಬಗ್ಗೆ ತನ್ನಲ್ಲಿನ ದುಗುಡವನ್ನು ಈ ರೀತಿ ತೋಡಿಕೊಂಡ : "ನನಗೆ ಒಬ್ಬನೇ ಮಗ. ನಾನು ಕಂಪ್ಯೂಟರ್ ಕಂಪನಿಯಲ್ಲಿ ದೊಡ್ಡ ಕೆಲಸದಲ್ಲಿರುವೆ. ನನ್ನ ಹೆಂಡತಿಯೂ ಅಷ್ಟೆ. ನಮ್ಮ ಮಗನನ್ನು ಗಿಣಿಯಂತೆ ಸಾಕುತ್ತಿದ್ದೇವೆ. ಯಾವುದಕ್ಕೂ ಕಡಿಮೆ ಮಾಡಿಲ್ಲ. ಮನೆಯಲ್ಲೂ ಆಟಕ್ಕೆಂದು ವಿಡಿಯೋ ಗೇಮ್ಸ್, ಕಂಪ್ಯೂಟರ್, ಕಾರ್ಟೂನ್ ನೆಟ್‌ವರ್ಕ್ ಎಲ್ಲವೂ ಇವೆ. ನೋಡಿಕೊಳ್ಳಲು ಆಯಾ ಇದ್ದಾಳೆ. ಒಂದು ಒಳ್ಳೆಯ ಶಾಲೆಗೆ ಭಾರಿ ಹಣ ತೆತ್ತು ಸೇರಿಸಿದ್ದೇವೆ. ಮನೆಪಾಠವೂ ನಡೆಯುತ್ತಿದೆ. ಇಷ್ಟೆಲ್ಲ ಸೌಕರ್ಯಗಳಿದ್ದರೂ ನನ್ನ ಮಗನ ಮೇಲಿನ ದೂರಿಗೆ ಕೊನೆಯೇ ಇಲ್ಲ. ಏನಾದರೂ ಸಹಾಯ ಮಾಡಿ."

ಸ್ವಾಮೀಜಿಯವರು ಮುಗುಳ್ನಕ್ಕು ಹೀಗೆಂದರು : "ಅಯ್ಯಾ, ಪುಣ್ಯಾತ್ಮ, ನಿನ್ನ ಮಗನನ್ನು ನೀನು ನಿಜವಾಗಿಯೂ ಒಂದು ಗಿಣಿಯಂತೆಯೇ ಸಾಕಿದ್ದಿ. ಅವನನ್ನು ಒಂದು ಯಂತ್ರವೆಂದೇ ಭಾವಿಸಿರುವೆ. ಅವನಿಗೂ ಭಾವನೆಯಿದೆ, ಮನಸ್ಸಿದೆ, ಇಷ್ಟವಿದೆ, ಕಷ್ಟವಿದೆ ಎಂದು ತಿಳಿದೇ ಇಲ್ಲ. ಪಂಜರದಲ್ಲಿರುವ ಒಂದು ಗಿಣಿಗೂ ಎಲ್ಲ ಸೌಕರ್ಯ ಉಂಟು. ಆದರೆ ಪಂಜರ ತೆಗೆದು ನೋಡು ಅದು ಒಂದು ಕ್ಷಣವೂ ನಿಲ್ಲುವುದಿಲ್ಲ. ಅದಕ್ಕೆ ಬೇಕಾಗಿರುವುದು ಸ್ವಾತಂತ್ರ್ಯ, ಮುಕ್ತವಾದ ಪ್ರೀತಿ. ಒಂದು ಸಣ್ಣ ಗಿಣಿಗೇ ಹಾಗಿದ್ದಲ್ಲಿ ನಿನ್ನ ಮಗನಿಗೆ ಹೇಗಾಗಿರಬೇಡ, ಯೋಚಿಸು.

"ಪ್ರೀತಿ, ವಾತ್ಸಲ್ಯವನ್ನು ದುಡ್ಡಿನಿಂದ ಪಡೆಯಲಾಗುವುದಿಲ್ಲ. ಇದನ್ನು ಕೆಲಸಗಾರರಿಂದ ನಿರೀಕ್ಷಿಸಬಾರದು. ಅದು ತಂದೆತಾಯಿಯರಿಂದ ಬರಬೇಕು ಮತ್ತು ಅದೇ ಅವರ ಕರ್ತವ್ಯ. ಮಕ್ಕಳಿಗೆ ಸ್ವಂತಿಕೆ, ಸ್ವಾತಂತ್ರ್ಯ, ಆಟ, ಪಾಠ, ಜೊತೆಗಾರರು ಎಲ್ಲವೂ ಬೇಕು. ನೀವು ಸಹ ಅವರೊಂದಿಗೆ ಕಾಲ ಕಳೆಯಬೇಕು, ಸ್ವಚ್ಛಂದವಾಗಿರಲು ಸಹಕರಿಸಬೇಕು. ಒಂದು ಉತ್ತಮ ಶಾಲೆಗೆ ಕಳುಹಿಸಿ, ಬೇರೆಯವರಿಂದ ಕೆಲಸ ಮಾಡಿಸಿದರೆ ಜವಾಬ್ದಾರಿ ಮುಗಿಯುವುದಿಲ್ಲ. ಮನೆಪಾಠದಿಂದ ಏನೂ ಪ್ರಯೋಜನವಿಲ್ಲ.

"ಅವರ ಇಷ್ಟ, ಕಷ್ಟ, ಒಳಿತು ಕೆಡುಕುಗಳಿಗೆ ಸ್ಪಂದಿಸಬೇಕು. ಆದರೆ ಮುದ್ದಿಗೆ ಅವಕಾಶವಿರಬಾರದು. ಧೈರ್ಯವಂತರಾಗಿ, ಸ್ವಬುದ್ಧಿಯುಳ್ಳವರಾಗಿ ವಿವೇಚನಾಪರರಾಗಿ, ಸತ್ಪ್ರಜೆಗಳಾಗುವಂತೆ ಬೆಳೆಸಬೇಕು. ಮಕ್ಕಳ ಗೆಳೆಯರ ಬಗ್ಗೆಯೂ ಗಮನ ನೀಡಬೇಕು. ಆಗಾಗ್ಗೆ ಶಾಲೆಗೆ ಭೇಟಿ ನೀಡಿ ಮಕ್ಕಳ ಬೆಳವಣಿಗೆ, ಚಟುವಟಿಕೆ ಮತ್ತು ಓದಿನ ಬಗ್ಗೆ ಗಮನವಿಟ್ಟಿರಬೇಕು."

ಸ್ವಾಮೀಜಿಯವರ ಹಿತನುಡಿಗಳು ಭಕ್ತನ ಮನಸ್ಸಿಗೆ ನಾಟಿದವು. ಅವನಿಗೆ ತಾನು ಎಲ್ಲಿ ತಪ್ಪು ಮಾಡಿದ್ದೇನೆ ಎಂಬ ಅರಿವಾಯಿತು. ಈ ಅರಿವಿನಿಂದ ಅವನ ಮಗ ಹಿಂದಿನ ಪಂಜರದ ಗಿಳಿಯಾಗದೆ, ಬಂಧಮುಕ್ತನಾದ. ಆದರೆ ಬೇರೆಲ್ಲೂ ಹಾರಿ ಹೋಗದ ಜಾಣಗಿಣಿಯಂತಾದ. ಮನೆಗೆ, ಸಮಾಜಕ್ಕೆ ಮತ್ತು ನಾಡಿಗೆ ಕೀರ್ತಿ ತಂದ.

**—ಬಿ.ಎಸ್. ಜಗದೀಶ್‌ಚಂದ್ರ, ಬೆಂಗಳೂರು.**

ದರೋಡೆಕೋರನೊಬ್ಬನಿಗೆ ಶಿಕ್ಷೆ ವಿಧಿಸುತ್ತಿರುವಾಗ ನ್ಯಾಯಾಧೀಶನು ಅವನನ್ನು "ನೀನೇನಾದರೂ ಹೇಳುವುದಿದೆಯೇ" ಎಂದು ಕೇಳಿದ. ಆತನು ಹೇಳಿದ: "ಹೌದು, ಹೇಳುವುದಿದೆ. ನನ್ನ ತಂದೆತಾಯಿಗಳಿಗೂ ಜೈಲುಶಿಕ್ಷೆ ವಿಧಿಸಬೇಕು." "ಏಕೆ?" ಎಂದು ಕೇಳಿದುದಕ್ಕೆ ಆತನೆಂದ: "ನಾನು ಚಿಕ್ಕ ಬಾಲಕನಿದ್ದಾಗ ಶಾಲೆಯಲ್ಲಿ ಒಂದು ಪೆನ್ಸಿಲ್ ಕದ್ದೆ. ನನ್ನ ತಂದೆತಾಯಿಗಳಿಗೆ ಅದು ತಿಳಿದಿದ್ದರೂ ಅವರೇನೂ ಹೇಳಲಿಲ್ಲ. ಅನಂತರ ನಾನು ಒಂದು ಪೆನ್ ಕದ್ದೆ. ಆಗಲೂ ಅವರು ಏನೂ ಹೇಳಲಿಲ್ಲ. ಹೀಗೆ ನಾನು ಶಾಲೆಯಿಂದಲೂ ನೆರೆಹೊರೆಯಿಂದಲೂ ವಸ್ತುಗಳನ್ನು ಕದಿಯಲು ಪ್ರಾರಂಭಿಸಿದೆ ಮುಂದೆ ಅದು ಅಭ್ಯಾಸವಾಗಿ ಹೋಯಿತು. ಅವರು ನನ್ನ ದೋಷವನ್ನು ತಿಳಿಸಿ ಬುದ್ಧಿ ಕಲಿಸಲಿಲ್ಲ. ಈಗ ನನ್ನೊಡನೆ ಜೈಲಿನಲ್ಲಿ ಇರಬೇಕಾದವರು ಅವರು."

**(ಮೂಲ: "You Can Win")**